# ಮೇಘಮಲ್ಹಾರದೂರು ಸಂಡೂರು



**ದಶಕದ ಹಿಂದೆ ಗಣಿಗಾರಿಕೆಯ ಕಾರಣದಿಂದಾಗಿ ಮೈಯೆಲ್ಲ ಗಾಯಗೊಂಡಿದ್ದ ಸಂಡೂರು, ಇದೀಗ ಹಸಿರು ಮುಲಾಮಿನಲ್ಲಿ ಹೊಸ ಉಸಿರು ಪಡೆದುಕೊಂಡಿದೆ. ಪ್ರಕೃತಿಯ ಜೀವಶಕ್ತಿಯನ್ನು ನೋಡಲಿಕ್ಕೆ ಸಂಡೂರಿಗೆ ಬರಬೇಕು. 'ಬನ್ನಿ, ಸ್ವಾಗತ' ಎಂದು ಮಳೆದಿನಗಳ ಮೋಡಗಳು ಪ್ರಕೃತಿಪ್ರಿಯರನ್ನು ಆಹ್ವಾನಿಸುತ್ತಿವೆ.**

**■ ಸ್ವರೂಪಾನಂದ ಎಂ. ಕೊಟ್ಟೂರು**

ಮೇಘಗಳ ಮೆರವಣಿಗೆ ನಡೆದಿದೆ ನೋಡಿದಿರಾ?

ಇದು ಸಂಡೂರಿನಲ್ಲಿ ನಡೆಯುತ್ತಿರುವ ಮೇಘಗಳ ಮೆರವಣಿಗೆಯ ನುಡಿನೋಟ. 'ಸ್ಕಂದಸಿರಿ ನಾಡು' ಸಂಡೂರಿನ ಅಷ್ಟ ದಿಕ್ಕುಗಳಲ್ಲಿಯ ಅಷ್ಟೂ ಬೆಟ್ಟಗುಡ್ಡಗಳ ಮೇಲೆ ಮಳೆಯ ದಿನಗಳಲ್ಲಿ ಮೋಡಗಳ ಕಣ್ಣಾಮುಚ್ಚಾಲೆ. ಬೆಟ್ಟಗುಡ್ಡಗಳನ್ನು ಮುದ್ದಿಸುವಂತೆ ಮೋಡಗಳು ಸುಳಿದಾಡುವುದನ್ನು ನೋಡುವುದು ಕಣ್ಣುಗಳಿಗೆ ಹಬ್ಬ.

ಸಂಡೂರು ಬಯಲು ಸೀಮೆಯ ಸ್ವರ್ಗ, ಲೋಹದ ನಾಡೆಂದು ಪ್ರಸಿದ್ಧ. ಈ ಸುರಸೀಮೆಯ ಪ್ರವೇಶಕ್ಕೆ ಹತ್ತಾರು ಕಿ.ಮೀ. ದೂರ ಇರುವಾಗಲೇ ಹಸಿರು ಬೆಟ್ಟಗಳ ಶ್ರೇಣಿಯೂ ಅವುಗಳನ್ನು ಕವಿದ ಮೋಡಗಳೂ ಸಹೃದಯರನ್ನು ಸೆಳೆಯುತ್ತವೆ. ಗಣಿಗಾರಿಕೆಯ ಕರಿ ನೆರಳು ಸರಿದ ಮೇಲೆ ಮೋಡಗಳ ಮೇಲಾಟ ಮನಕ್ಕೆ ಮುದ ನೀಡುತ್ತಿದೆ. ಬೆಟ್ಟಗಳು ತಮ್ಮ ಬಾಹುಬಲದಿಂದ ಓಡುವ ಮೋಡಗಳನ್ನು ತಡೆದು ನಿಲ್ಲಿಸಿವೆ ಎನ್ನುವಂತೆ ಭಾಸವಾಗುತ್ತದೆ.

ಅಬ್ಬರವಿಲ್ಲದ ಮೋಡಗಳ ಕ್ಯಾಟ್‌ವಾಕ್ ನೋಡುಗರ ಮೈಮನಗಳಿಗೆ ಕಚಗುಳಿಯಿಡುತ್ತದೆ. ಮೋಡಗಳು ಮತ್ತು ಬೆಟ್ಟಗುಡ್ಡಗಳ ನಡುವೆ ಗುಪ್ತ ಮಾತುಕತೆ ನಡೆಯುತ್ತಿದೆ ಎಂದು ಒಮ್ಮೆ ಅನ್ನಿಸಿದರೆ, ಮತ್ತೊಮ್ಮೆ ಬೆಟ್ಟಗಳ ಮಡಿಲಲ್ಲಿ ಮೋಡಗಳು ದಣಿವಾರಿಸಿಕೊಳ್ಳುತ್ತಿರುವ ಭಾವವುಂಟಾಗುತ್ತದೆ. ಒಂದಿನಿತೂ ಚಲಿಸದ ಭಾರ

